ಓ.ಎಸ್. ನಂ. 13/2022
ಪಿ.ಡಬ್ಲ್ಯೂ- 1

(ಇಂದು ದಿಃ 15-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಪಾಟೀ ಸವಾಲು :- ಶ್ರೀ.**H.L.A** ವಕೀಲರಿಂದ :-

1 ನೇ ಪ್ರತಿವಾದಿಯ ತಾಯಿ ಈರಮ್ಮ ಎಂದರೆ ಸರಿ. ಈರಮ್ಮ ಬದುಕಿದ್ದಾರೆ ಎಂದರೆ ಸರಿ. ಸದರಿ ಈರಮ್ಮ ರವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಈರಮ್ಮಳ ತಾಯಿ ಭಿಮವ್ವ ಎಂದರೆ ಸರಿ. ಸರ್ವೆ ನಂ. 731/3, 4 ಮತ್ತು 731/1, 741, 739/2 ಈ ಎಲ್ಲಾ ಜಮೀನುಗಳು ಮುಂಚೆ ಭಿಮವ್ವಳ ಹೆಸರಿನಲ್ಲಿದ್ದವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕರೆಪ್ಪನ ಹೆಸರಿನಲ್ಲಿದ್ದವು ಎಂದು ಹೇಳುತ್ತಾರೆ. ಭಿಮವ್ವಳ ಹೆಸರಿನಲ್ಲಿದ್ದರು ಕೂಡ ಕರೆಪ್ಪನ ಹೆಸರಿನಲ್ಲಿದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಭಿಮವ್ವಳ ಗಂಡ ತಿಪ್ಪಣ್ಣ ಚೋರಗಸ್ತಿ ಆಗಿದ್ದು ಸದರಿ ತಿಪ್ಪಣ್ಣನಿಂದ ಮೇಲಿನ ಜಮೀನುಗಳು ಭಿಮವ್ವಳಿಗೆ ಬಂದಿದ್ದವು ಎಂದರೆ ಸರಿಯಲ್ಲ. ಭಿಮವ್ವಳಿಂದ 1 ನೇ ಪ್ರತಿವಾದಿಗೆ ಬಂದವು ಎಂದರೆ ಸರಿಯಲ್ಲ. ಕಾರಣ 1 ನೇಪ್ರತಿವಾದಿಯೇ ಸದರಿ ಜಮೀನುಗಳು ಮಾಲಿಕ ಮತ್ತು ಸ್ವಾಧಿನದಾರ ಎಂದರೆ ಸರಿಯಲ್ಲ. ಸದರಿ ಜಮೀನುಗಳು 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತುಗಳಾಗಿರುವ ಕಾರಣ ಅವುಗಳಲ್ಲಿ ನನಗೆ ಯಾವುದೇ ಹಕ್ಕು ಅಥವಾ ಭಾಗ ಇಲ್ಲ ಎಂದರೆ ಸರಿಯಲ್ಲ. ಸದರಿ ಜಮೀನುಗಳಲ್ಲಿ ವಾದಿಯರಿಗೆ ಯಾವುದೇ ಭಾಗ ಇಲ್ಲದಿದ್ದರು 1 ನೇ ಪ್ರತಿವಾದಿಗೆ ತೋಂದರೆ ಕೊಡವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೆವೆ ಎಂದರೆ ಸರಿಯಲ್ಲ.

ನನ್ನ ಅತ್ತೆ ಅಂದರೆ 1 ನೇ ಪ್ರತಿವಾದಿಯ ಮೊದಲ ಹೆಂಡತಿ ಭಿಮವ್ವ @ ಭಿಮಬಾಯಿಗೆ 2 ಪ್ಲಾಟಗಳನ್ನು ಜೀವನಾಂಶಕ್ಕೆ ಎಂದು ಕೊಟ್ಟಿದ್ದು ಅದನ್ನು ಹೊರತು ಪಡಿಸಿ ಬೇರೆ ಯಾವುದೇ ಸ್ವತ್ತುಗಳಲ್ಲಿ ಅವಳಿಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಆಗಿಬರದ ಜನರ ಮಾತು ಕೇಳಿಕೊಂಡು ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು 1 ನೇ ಪ್ರತಿವಾದಿಗೆ ಸ್ವಯಾರ್ಜಿತ ಸ್ವತ್ತುಗಳಾಗಿರುವ ಕಾರಣ ಆತ ಅವುಗಳನ್ನು ಯಾರಿಗೆ ಬೇಕಾದರೂ ಪರಭಾರೆ ಮಾಡಬಹುದು ಎಂದರೆ ಸರಿಯಲ್ಲ. ನಾನು ಯಾವತ್ತು 1 ನೇ ಪ್ರತಿವಾದಿಯನ್ನು ಭೇಟಿಯಾಗಿಲ್ಲ ಮತ್ತು ಭಾಗ ಕೇಳಿಲ್ಲ ಎಂದರೆ ಸರಿಯಲ್ಲ. ದಾವಾ ಜಮೀನುಗಳು ಹೆಚ್ಚು ಬೆಲೆ ಬಾಳುವ ಸ್ವತ್ತುಗಳಾಗಿರುವ ಕಾರಣ ಅವುಗಳಲ್ಲಿ ಭಾಗ ಪಡೆದುಕೊಳ್ಳುವ ದುರುದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ಗಂಡ ಬದುಕಿದ್ದಾಗ 1 ನೇ ಪ್ರತಿವಾದಿ ನಮಗೆ ಅಂಗಡಿ ಹಾಕಿಕೊಟ್ಟು ವ್ಯವಸ್ಥೆ ಮಾಡಿದ್ದರು ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

**ಪಾಟೀ ಸವಾಲು :- 7 ಮತ್ತು 8 ಪ್ರತಿವಾದಿಗಳ ಪರ ಶ್ರೀ. B.S.S. ವಕೀಲರಿಂದ :-**

ದಾವಾ ಜಮೀನುಗಳು ಕರೆಪ್ಪನ ಹೆಸರಿನಲ್ಲಿವೆ. ದಾವಾ ಜಮೀನುಗಳು ಕರೆಪ್ಪನ ಹೆಸರಿನಲ್ಲಿವೆ ಎಂದು ತೋರಿಸಲು ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಜಮೀನುಗಳು 1 ನೇ ಪ್ರತಿವಾದಿಯ ತಾಯಿಯ ತಾಯಿ ಭಿಮವ್ವಳಿಂದ 1 ನೇ ಪ್ರತಿವಾದಿಗೆ ಬಂದಿವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಭಿಮವ್ವಳ ಸ್ತ್ರಿಧನ ಸ್ವತ್ತುಗಳಾಗಿದ್ದು ಅವಳಿಂದ 1 ನೇ ಪ್ರತಿವಾದಿಗೆ ಬಂದಿರುವ ಕಾರಣ ಅವುಗಳಲ್ಲಿ ನನಗೆ ಯಾವುದೇ ಭಾಗ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸಾಲ ತೀರಿಸುವ ಸಲುವಾಗಿ ಮತ್ತು ಮಕ್ಕಳ ಮದುವೆ ಖರ್ಚಿಗಾಗಿ ಸರ್ವೆ ನಂ. 731/1 ರಲ್ಲಿ 2 ಎಕರೆ ಜಮೀನನ್ನು 7 ನೇ ಪ್ರತಿವಾದಿಗೆ ನೋಂದಾಯಿತ ಖರೀದಿ ಪತ್ರದ ಮೂಲಕ 2011-12 ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. 2011-12 ರಲ್ಲಿ ಖರೀದಿ ಪತ್ರದ ಪ್ರಕಾರ 7 ನೇ ಪ್ರತಿವಾದಿ ಹೆಸರಿಗೆ ಮುಟೇಷನ ಆಗಿದ್ದು, ಖರೀದಿ ಆದಾಗಿನಿಂದ ಆತನೇ ಸದರಿ ಸ್ವತ್ತಿನಲ್ಲಿ ಸ್ವಾಧಿನದಲ್ಲಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ 731/1 ರಲ್ಲಿ 1 ಎಕರೆ 24 ಗುಂಟೆ ಸ್ವತ್ತನ್ನು ಸಾಲ ತೀರಿಸುವ ಸಲುವಾಗಿ ಮತ್ತು ಮಕ್ಕಳ ಮದುವೆ ಖರ್ಚಿಗಾಗಿ 1 ನೇ ಪ್ರತಿವಾದಿ 2012-13 ರಲ್ಲಿ 8 ನೇ ಪ್ರತಿವಾದಿಗೆ ನೋಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಅದರಂತೆ ಮುಟೇಷನ ಆಗಿ, ಖರೀದಿ ಆದಾಗಿನಿಂದ ಆತನೇ ಸದರಿ ಸ್ವತ್ತಿನ ಸ್ವಾಧಿನದಲ್ಲಿದ್ದಾನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳು ಹಿರಿಯರ ಆಸ್ತಿಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು 1 ನೇ ಪ್ರತಿವಾದಿ ತಾಯಿಕಡೆಯಿಂದ 1 ನೇ ಪ್ರತಿವಾದಿಗೆ ಬಂದಿರುವ ಕಾರಣ ಅವುಗಳಲ್ಲಿ ನನಗೆ ಯಾವುದೇ ಭಾಗ ಇಲ್ಲ ಎಂದರೆ ಸರಿಯಲ್ಲ.ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(5** ಮತ್ತು **6** ನೇ ಪ್ರತಿವಾದಿಯರು ಪ್ರತಿವಾದ ಪತ್ರ ಸಲ್ಲಿಸದೇ ಇರುವ ಕಾರಣ **5** ಮತ್ತು **6** ನೇ ಪ್ರತಿವಾದಿಯರ ಪರ ಪಾಟಿ ಸವಾಲನ್ನು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು, **9** ಮತ್ತು **10** ಪ್ರತಿವಾದಿಯರ ಪರ ಶ್ರೀ **SBM** ವಕೀಲರು ಕಾಲವಕಾಶ ಕೇಳಿದ್ದು ನೀಡಲಾಯಿತು)

(ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.